ಮನವರಿಕೆ ಮಾಡಿಕೊಡೋಣ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮುಂದೆ ನಾವು ಲೀಗಲ್ ಸ್ಟೆಪ್ಸ್ ಏನು ತೆಗೆದುಕೊಳ್ಳಬೇಕೆಂಬ ಬಗ್ಗೆ ಅದರ ಬಗ್ಗೆಯೂ ಕೂಡ ನಾವು ಚಿಂತನೆಯನ್ನು ಮಾಡೋಣ. ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ, ಅದಕ್ಕಾಗಿ ಈ ಎರಡೂ ಆಲ್ಟರ್‌ನೇಟಿವ್ ಪ್ರಪೋಜಲ್ ನಮ್ಮಲ್ಲಿ ಇದ್ದಾಗ ಮುಂದಿನ ವಿಷಯದ ಬಗ್ಗೆ ಪುನ: ಪ್ರಸ್ತಾಪ ಮಾಡದೆ ಇಷ್ಟು ಮಾತ್ರ ಅವರನ್ನೂ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಎಲ್ಲರೂ ಕೂಡ ಸಹಕರಿಸಬೇಕು, ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಸರ್ಕಾರದ ಮನವೊಲಿಸಬೇಕು, ನಾವೆಲ್ಲರೂ ಒಟ್ಟಾಗಿದ್ದೇವೆ ಆ ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಬೇಕು, ಕೃಷ್ಣಾಬೇಸಿನ್‌ನಲ್ಲಿರುವಂತಹ ರೈತರಿಗೆ ನಮ್ಮ ಬಗ್ಗೆ ವಿಶ್ವಾಸ ಬರಬೇಕು, ಈ ದೃಷ್ಟಿಯಿಂದ ನಾವು ನಿನ್ನೆಯಿಂದ ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ಬೇಕಾದರೆ ನಾಳೆ ಚರ್ಚೆ ಮಾಡೋಣ, ಸ್ಪೀಕರ್ ಕೊಠಡಿಯಲ್ಲಿ ಸೇರೋಣವೆಂದು ಏತಕ್ಕೆ ಸಲಹೆ ಕೊಟ್ಟೆ ಅಂದರೆ ನೀವು ಮತ್ತೆ ಕನ್ಸ್‌ಲ್ಟೇಷನ್ ಮತ್ತು ಚರ್ಚೆಯನ್ನು ಮಾಡಿ ಆ ಸರ್ವಾನುಮತದ ನಿರ್ಣಯಕ್ಕೆ ನೀವು ಸಹಕಾರ ಕೊಡುತ್ತೀರೆಂದು ನಾನು ಭಾವಿಸಿದ್ದೆ. ಆ ಸರ್ವಾನುಮತದ ನಿರ್ಣಯವೇನು? ಈಗ ಇಲ್ಲೀಗಲ್ ಆಗಿ ಏನು ಪ್ರಾಜೆಕ್ಟ್‌ಗಳನ್ನು ಶುರುಮಾಡುವುದಕ್ಕೆ ಹೊರಟಿದ್ದಾರೆ, ತತ್‌ಕ್ಷಣ ಕೇಂದ್ರ ಸರ್ಕಾರ ಅದನ್ನು ತಡೆಯಬೇಕು. ಇದನ್ನು ಬಿಟ್ಟು ಒಂದು ಶಬ್ದ ಬೇರೆ ಸೇರಿಸುವುದರ ಬಗ್ಗೆ ನಾವು ಹೇಳಲಿಲ್ಲ. ನೀವು ಹೇಳಿರುವ ಹಾಗೆ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಕಳೆದ ಅನೇಕ ವರ್ಷಗಳಿಂದ ಆಂಧ್ರದ ಕೈ ಬಲ ಎಲ್ಲಾ ಸಂದರ್ಭದಲ್ಲಿಯೂ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಅವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಪ್ರಾಜೆಕ್ಟ್‌ನ್ನು ಮುಂದುವರಿಸಿಕೊಂಡು 'ಎ' ಸ್ಕಿಂ ನೀರನ್ನು ಪೂರ್ಣ ಉಪಯೋಗಿಸಿಕೊಂಡು 'ಬಿ' ಸ್ಕಿಂಗೂ ಕೈಹಾಕಿ ನಮ್ಮನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸುವುದರಲ್ಲಿ ಪ್ರಯತ್ನ ಮಾಡುವುದರಲ್ಲಿ ಅವರು ಯಶಸ್ವಿಯಾಗುತ್ತಲೇ ಬರುತ್ತಿದ್ದಾರೆ. ಇವತ್ತು ಈ ಒಂದು ವಿಚಾರ ಗೊತ್ತಾದ ಮೇಲೆ ಸುಪ್ರಿಂಕೋರ್ಟಿಗೆ ಹೋಗುವಂತಹ ಪ್ರಯತ್ನವನ್ನು ನೀವು ಮಾಡಬಹುದಾಗಿತ್ತು ಅಥವಾ ನಮ್ಮನ್ನು 5–6 ತಿಂಗಳ ಹಿಂದೆಯೇ ಈ ಸುದ್ದಿ ಗೊತ್ತಾದ ತಕ್ಷಣ ಕನ್ಸ್‌ಲ್ಟ್ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ನೀವು ಮಾಡಬೇಕಾಗಿತ್ತು. ಅಥವಾ ಚೀಫ್ ಇಂಜಿನಿಯರ್ ಡಬ್ಲೂ ಆರ್ ಡಿ ಓ

ಪತ್ರಬರೆದಾಗ ಅಂದರೆ ಅದರ ಬಗ್ಗೆ ನಿಮಗೆ ಮಾಹಿತಿ ಗೊತ್ತಾದ ತಕ್ಷಣ ಪ್ರತಿಪಕ್ಷದ ನಾಯಕರ ಸಭೆಯನ್ನು ಕರೆದು ಏನು ಮಾಡಬೇಕೆಂಬುದರ ಬಗ್ಗೆ ಸಮಾಲೋಚನೆ ಮಾಡಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಗಳೇ, ನನಗೆ ಏನು ಅನ್ನಿಸುತ್ತದೆಂದರೆ, ಯಾವುದೇ ಆಗಲಿ ಇವತ್ತು ಕೇಂದ್ರಸರ್ಕಾರ ಒಂದಲ್ಲ ಒಂದು ಕಾರಣಕ್ಕಾಗಿ ಆಂಧ್ರದ ಮೇಲೆ ಡಿಪೆಂಡ್ ಆಗಿರುವುದರಿಂದ ನೀವು ಮನಸ್ಸು ಮಾಡಿ ಈ ನಿರ್ಣಯವನ್ನು ಮಾಡಿದರೆ ಎಲ್ಲಿ ನಾಳೆ ನಮ್ಮ ಕುರ್ಚಿಗೆ ಧಕ್ಕೆಯಾಗುತ್ತದೆಂಬ ಭಯ ನಿಮ್ಮನ್ನು ಕಾಡಿಸುತ್ತಾ ಇರಬಹುದು. ಆದರೆ ಅವರು ಪ್ರಬಲರಾಗಿದ್ದಾರೆಂದು ನಾನು ಹೇಳುತ್ತಿದ್ದೇನೆ. ಅವರಿಗೆ ಎಂಪಿಗಳ ಸಂಖ್ಯೆ ಇದೆ, ಆದರೆ ಕರ್ನಾಟಕ ರಾಜ್ಯವು ನಿಮ್ಮ ಜೊತೆಗೆ ಇದೆಯಲ್ಲಾ, ಯಾವುದೇ ಒಂದು ಶಬ್ದ, ನಾವೆಲ್ಲರೂ ಎಂ.ಪಿ.ಗಳು, ಎಂ.ಎಲ್.ಎ.ಗಳು ಒಟ್ಟಾಗಿರಬೇಕು ಒಂದು ಚಕಾರ ವಿರುದ್ಧವಾದ ಒಂದು ಮಾತಿಲ್ಲವಲ್ಲಾ, ಹೀಗಿದ್ದರೂ ಕೂಡ ನಿರ್ಣಯ ಮಾಡಿದರೆ ನಾವು ರೆಡಿ ಇದ್ದೇವೆ. ಹಾಗಾದರೆ ನೀವು ಪತ್ರ ಬರೆದಿರಿ, ಅದು ಬರೆದ ಮೇಲೆ ಏನಾಯಿತು? ನಿಮಗೆ ರಿಪ್ಲೈ ಬರಲಿಲ್ಲ, ಸರ್ವಾನುಮತದ ನಿರ್ಣಯವನ್ನು ಮಾಡಿ ಪ್ರಧಾನಮಂತ್ರಿಯವರಿಗೂ ಕೂಡ ಒಂದು ಒತ್ತಡ ಬಂದರೆ ಅವರು ಹೈಕಮಾಂಡ್ ಮತ್ತೊಂದಕ್ಕೆ ಯಾವುದಕ್ಕೂ ಕೂಡ ಬಲಿಯಾಗದೆಯೇ ಆಂಧ್ರಕ್ಕೆ ಆ ಸೂಚನೆಯನ್ನು ಕೊಟ್ಟು ಕ್ರಮ ತೆಗೆದುಕೊಳ್ಳುತ್ತಾರೆಂಬ ಆಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇಷ್ಟಾದರೂ ಕೂಡ ತಾವು ಒಪ್ಪದೆ ಇರುವುದರಿಂದ ಎಲ್ಲೋ ಒಂದು ಕಡೆ ನಿಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ, ಕೇಂದ್ರಸರ್ಕಾರವನ್ನು ಮೈಮೇಲೆ ಹಾಕಿಕೊಳ್ಳುವುದಕ್ಕೆ ಇಷ್ಟ ಇಲ್ಲದಿರುವುದರಿಂದ ಈ ಕೆಲಸವನ್ನು ಮಾಡುತ್ತಿದ್ದೀರಿ. ಆದ್ದರಿಂದ ರಾಜ್ಯದ ರೈತರ ಸಂಪೂರ್ಣ ಕೃಷ್ಣಾ ಬೇಸಿನ್ ರೈತರ ಇಚ್ಛಾಶಕ್ತಿಗೆ, ಅವರ ಅಪೇಕ್ಷೆಗೆ ಪೂರೈಸುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ನಿಮ್ಮಲ್ಲಿ ಇಲ್ಲ ಎಂದು ನೋಡಿ ಪ್ರತಿಪಕ್ಷದವರು ಅನಿವಾರ್ಯವಾಗಿ ನಾವು ಧರಣಿ ಕುಳಿತುಕೊಳ್ಳುತ್ತೇವೆ ಸ್ವಾಮಿ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಇಲ್ಲಾ ಸದಸ್ಯರು ಧರಣಿ ಮಾಡಲು ಸದನದ ಬಾವಿಗೆ ಆಗಮಿಸಿದರು)

ಶ್ರೀ ವಾಟಾಳ್ ನಾಗರಾಜ್ : ಆಂಧ್ರಸರ್ಕಾರದ ವಿರುದ್ಧ ನಾನು ಸಭಾತ್ಯಾಗ ಮಾಡುತ್ತಿದ್ದೇವೆ. ಆಂಧ್ರಸರ್ಕಾರ ಕೈಗೊಂಡಿರುವ ಕಾರ್ಯಕ್ರಮದ ವಿರುದ್ಧ